ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20** **ದಿನಾಂಕ: 25–09–2019**

# ಪತ್ರಿಕಾ ಆಮಂತ್ರಣ

1. National Health Mission Directorate of Health and Family Welfare Service has organised State Level Launch and Sensitization workshop on ANAEMIA MUKT BHARAT (AMB)

   Inauguration :

   Smt. Vandita Sharma, IAS,
   Additional Chief Secretary and Development Commissioner, GOK

   Date: 26-09-2019 Thursday Time : 10-30 A.M.

   Venue: Hotel Chancery Pavilion, Bengaluru.

# ಪತ್ರಿಕಾ ಪ್ರಕಟಣೆ

## ಅರ್ಜಿ ಆಹ್ವಾನ

ಬೆಂಗಳೂರು, ಸೆಪ್ಟೆಂಬರ್ 25 ( ಕರ್ನಾಟಕ ವಾರ್ತೆ ) :

“ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯಿಂದ ನಡೆಸುವ ವಿದ್ಯುತ್ ಮೇಲ್ವಿಚಾರಕರ ಸಾಮಾನ್ಯ ಮತ್ತು ಗಣಿ ಹಾಗೂ ತಂತಿ ಕಲೆಸಗಾರರಿ ಪರೀಕ್ಷೆಗಳನ್ನು ನಡೆಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಜಿಲ್ಲಾ ಮಟ್ಟದ/ಕ್ಷೇತ್ರೀಯ ಉಪ ವಿದ್ಯುತ್ ಪರಿವೀಕ್ಷಕರಿಗೆ ದಿನಾಂಕ: 30–09–2019 ರಿಂದ 29–10–2019 ರ ರೆಗೆ ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯ www.ksci.gov.in

ವೆಬ್‌ಸೈಟ್‌ನಲ್ಲಿ ಆನ್ ಲೈನ್ ಸೇವೆ (ಇ–ಸುರಕ್ಷಾ) ಯಡಿಲ್ಲಿ ಸಲ್ಲಿಸುವುದು ಹಾಗೂ ಸಲ್ಲಿಸಿರುವ ದಾಖಲೆಗಳ ಪ್ರತಿಗಳನ್ನು ಸಂಬಂಧಿಸಿದ ಉಪ ವಿದ್ಯುತ್ ಪರಿವೀಕ್ಷಕರಿಗೆ ಪರಿಶೀಲನೆಗಾಗಿ ಸಲ್ಲಿಸಬಹುದಾಗಿದೆ ಎಂದು ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ, ನಿರ್ಮಾಣ ಭವನ, 2ನೇ ಮಹಡಿ, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, 1ನೇ ಕ್ರಾಸ್, ಬೆಂಗಳೂರು – 560 010 ಇವರ ಪ್ರಕಟಣೆ ತಿಳಿಸಿದೆ.

## APPLICATIONS INVITED

Bengaluru, September 25 (Karnataka Information)

The Department of Electrical Inspectorate invites applications from eligible candidates for the Electrical Supervisor General, Electrical Supervisor (Mines) and Electrical Wiremen Examination. The Online applications shall be submitted to the Deputy Electrical Inspector of concerned District from 30-10-2019 to 29-10-2019 through online e-services provided in the departmental website www.ksei.gov.in, and the hard copy of all documents shall be furnished to the concerned Deputy Electrical Inspector for verification.

# ಬೇಕರಿ ತರಬೇತಿ

**ಬೆಂಗಳೂರು, ಸೆಪ್ಟೆಂಬರ್ 25 ಕರ್ನಾಟಕ ವಾರ್ತೆ)**

ಬೇಕರಿ ತರಭೇತಿ ಘಟಕದ ವತಿಯಿಂದ 4 ವಾರಗಳ ಬೇಕರಿ ತರಭೇತಿ ಕಾರ್ಯಕ್ರಮವನ್ನು ಆಸಕ್ತಿಯುಳ್ಳ ಬೇಕರಿದಾರರಿಗೆ ಉದ್ದಿಮೆ ಮತ್ತು ಗೃಹಿಣಿಯರಿಗಾಗಿ ಆಯೋಜಿಸಲಾಗಿದೆ. ತರಬೇತಿಯು ದಿನಾಂಕ **01.10.2019** ರಿಂದ ಪ್ರಾರಂಭವಾಗಲಿದೆ. ಈ ತರಬೇತಿಯಲ್ಲಿ ಬ್ರೆಡ್, ಬನ್, ಪಪ್ಸ್, ಕೇಕ್‌ಗಳು, ವಿಶೇಷ ಬಿಸ್ಕತ್ತುಗಳು, ರೋಲ್ಸ್‌ಗಳು ಮತ್ತಿತರ ಆಕರ್ಷಕ ಬೇಕರಿ ಪದಾರ್ಥಗಳನ್ನು ಕಲಿಸಲಾಗುವುದು. ಅಭ್ಯರ್ಥಿಗಳು ಸ್ವತ: ಪದಾರ್ಥ ತಯಾರಿಸುವ ಮೂಲಕ ಕಲಿಯುವ ಸೌಲಭ್ಯವಿದೆ. ಯಾವ್ಯದೇ ವಿದ್ಯಾರ್ಹತೆ ಅವಶ್ಯಕತೆಯಿಲ್ಲ. ತಯಾರಿಕೆಗೆ ಬೇಕಾದ ಕಚ್ಚಾ ಪದಾರ್ಥಗಳನ್ನ ತರಬೇತಿ ಘಟಕದಲ್ಲೇ ಒದಗಿಸಲಾಗುವುದು. ಹೆಚ್ಚಿನ ವಿವರಗಳಿಗೆ **ಸಂಯೋಜಕರು, ಬೇಕರಿ ತರಬೇತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಹೆಬ್ಬಾಳ, ಬೆಂಗಳೂರು–560 024,** ಇವರನ್ನು ಖುದ್ದಾಗಿ ಅಥಾವ ದೂರವಾಣಿ ಸಂಖ್ಯೆ **23513370** ಮೂಲಕ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

**BAKING COURSE**

Bengaluru, September 25 (Karnataka Information)

The Bakery Training Unit, , Hebbal, Bangalore Is conducting ***4 weeks training course on Bakery Technology*** for the benefit of Housewives and Entrepreneurs from **01.10.2019**. Bakery products like special Biscuits, Bread Rolls, Puffs, Cakes and fancy items will be taught during the course. Participants will be allowed to learn by preparing the products by themselves. The interested persons can contact Coordinator in person or through telephone no. **23513370** during office hours.

# ಸಚಿವರ ಪ್ರವಾಸ

**ಬೆಂಗಳೂರು, ಸೆಪ್ಟೆಂಬರ್ 25 ಕರ್ನಾಟಕ ವಾರ್ತೆ)**

**ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವ ಶ್ರೀ ಎಸ್. ಸುರೇಶ್‌ಕುಮಾರ್ ಅವರು ಸೆಪ್ಟೆಂಬರ್ 27 ರಿಂದ 28 ರವರೆಗೆ ಕಲಬುರಗಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಕೇಂದ್ರಸ್ಥಾನಕ್ಕೆ ಹಿಂತಿರುಗುವರು. ಪುನ: ಸೆಪ್ಟೆಂಬರ್ 29 ರಿಂದ 30 ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರೆಂದು ಪ್ರಕಟಣೆ ತಿಳಿಸಿದೆ.**

## ರಾಜ್ಯ ಮಾನವ ಹಕ್ಕುಗಳ ಆಯೋಗ ಸದಸ್ಯರ ಪ್ರವಾಸ

**ಬೆಂಗಳೂರು, ಸೆಪ್ಟೆಂಬರ್ 25 ಕರ್ನಾಟಕ ವಾರ್ತೆ)**

ಶ್ರೀ ರೂಪಕ್‌ಕುಮಾರ್ ದತ್ತಾ ನಿವೃತ್ತ ಐಪಿಎಸ್,  ಸದಸ್ಯರು, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ ಇವರು ಅಕ್ಟೋಬರ್ 1 ರಂದು ತುಮಕೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು.

## ಫಲಿತಾಂಶ ಪ್ರಕಟ

ಬೆಂಗಳೂರು,  ಸೆಪ್ಟೆಂಬರ್ 25 ( ಕರ್ನಾಟಕ ವಾರ್ತೆ ) :

ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ವತಿಯಿಂದ ಆಗಸ್ಟ್ –2019 ರಲ್ಲಿ ನಡೆದ ಗಣಕಯಂತ್ರ ಶಿಕ್ಷಣ ಪರೀಕ್ಷೆಯ ಫಲಿತಾಂಶವನ್ನು ಸೆಪ್ಟೆಂಬರ್ 26 ರಂದು ಮಂಡಳಿಯ ವೆಬ್‌ಸೈಟ್ **www.kseeb.kar.nic.** ನಲ್ಲಿ ರಾಜ್ಯಾದ್ಯಂತ ಪ್ರಕಟಿಸಲಾಗುವುದು.